ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ ಬೆಂಗಳೂರು-01

ಸಂಖ್ಯೆ:ಸಿ5(8)ನಿ.ಮಾ.01/2021-22 ದಿನಾಂಕ:07/10/2021

ಗೆ

ಸಾರ್ವಜನಿಕ ಶಿಕ್ಷಣ ಇಲಾಖೆಯ
ಬೆಂಗಳೂರು ಮತ್ತು ಮೈಸೂರು ವಿಭಾಗದ
ಜಿಲ್ಲಾ ಉಪನಿರ್ದೇಶಕರು(ಆಡಳಿತ)

ಮಾನ್ಯರೆ,

ವಿಷಯ: 2022 ನೇ ಸಾಲಿನಲ್ಲಿ ದಿನಾಂಕ: 01-01-2022 ರಿಂದ 31-12-2022 ರ ಅವಧಿಯಲ್ಲಿ 60 ವರ್ಷ ವಯೋಮಿತಿ ಪೂರೈಸಿ ನಿವೃತ್ತರಾಗಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ವೃಂದದ ಅಧಿಕಾರಿಗಳು/ನೌಕರರ ಪಟ್ಟಿ ಪ್ರಕಟಿಸುವ ಬಗ್ಗೆ.

*******

2022 ನೇ ವರ್ಷದಲ್ಲಿ (ದಿನಾಂಕ: 01-01-2022 ರಿಂದ 31-12-2022 ರ ಅವಧಿಯಲ್ಲಿ) 60 ವರ್ಷ ವಯೋಮಿತಿ ಪೂರೈಸಿ ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ವೃಂದದ ಗ್ರೂಪ್ ಬಿ. ಸಿ ಮತ್ತು ಗ್ರೂಪ್ ಡಿ ಅಧಿಕಾರಿಗಳು/ನೌಕರರ ನಿವೃತ್ತಿ ಪಟ್ಟಿಯನ್ನು ಈ ಕಛೇರಿ ಹಂತದಲ್ಲಿ ಪ್ರಕಟಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ವ್ಯಾಪ್ತಿಯ ವಿವಿಧ ಶಾಲಾ/ಕಾಲೇಜು(ಪ್ರೌಢ ಶಾಲಾ ವಿಭಾಗ) ಮತ್ತು ಕಛೇರಿಗಳಲ್ಲಿ ಹಾಗೂ ಜಿಲ್ಲಾ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ ಮತ್ತು ಇನ್ನಿತರೆ ಕಛೇರಿಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 01-01-2022 ರಿಂದ 31-12-2022 ರೊಳಗೆ ವಯೋನಿವೃತ್ತಿ ಹೊಂದಲಿರುವ ಬೋಧಕೇತರ ವೃಂದದ ಅಧಿಕಾರಿಗಳು/ನೌಕರರು ಪತ್ರಾಂಕಿತ ಸಹಾಯಕರು, ಸಹಾಯಕ ನಿರ್ದೇಶಕರು/ಪತ್ರಾಂಕಿತ ವ್ಯವಸ್ಥಾಪಕರು, ಲೆಕ್ಕಾಧೀಕ್ಷಕರು, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು, ಗ್ರಂಥಪಾಲಕರು, ದ್ವಿತೀಯ ದರ್ಜೆ ಸಹಾಯಕ ಸಹಿತ ಬೆರಳಚ್ಚುಗಾರರು, ಬೆರಳಚ್ಚುಗಾರರು, ವಾಹನ ಚಾಲಕರು, ಪರಿಚಾರಕರು/ಪ್ರಯೋಗಶಾಲಾ ಸಹಾಯಕರು, ಗ್ರೂಪ್ 'ಡಿ' ನೌಕರರು ಇವರ ವಿವರಗಳನ್ನು ನೌಕರರ ಸೇವಾ ಪುಸ್ತಕವನ್ನು ಪರಿಶೀಲಿಸಿ, ಕೆಳಕಂಡ ನಮೂನೆಯಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರೌಢ ಶಾಲೆ/ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಮತ್ತು ವಿವಿಧ ಕಛೇರಿಗಳಲ್ಲಿನ ಕ್ರೋಢೀಕೃತ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ದಿನಾಂಕ: 25/10/2021 ರೊಳಗೆ ತಪ್ಪದೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

| ಕ್ರಸಂ | ಅಧಿಕಾರಿ/ನೌಕರರ ಹೆಸರು ಮತ್ತು ಕಛೇರಿ ವಿಳಾಸ | ಪದನಾಮ | ಜನ್ಮ ದಿನಾಂಕ (ದಿನಾಂಕ/ತಿಂಗಳು/ವರ್ಷ) | ಸೇವೆಗೆ ಸೇರಿದ ದಿನಾಂಕ | ವಯೋನಿವೃತ್ತಿ ಹೊಂದಲಿರುವ ದಿನಾಂಕ (ದಿನಾಂಕ/ತಿಂಗಳು/ವರ್ಷ) | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |

ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕ ಅಥವಾ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂಬುದನ್ನು ದೃಢಪಡಿಸಿಕೊಳ್ಳುವುದು.

ನಿವೃತ್ತರಾಗುವವರು ಯಾರು ಇಲ್ಲದ ಪಕ್ಷದಲ್ಲಿ ಶೂನ್ಯ ವರದಿ ಎಂದು ಸಲ್ಲಿಸತಕ್ಕದ್ದು. ಸಾಫ್ಟ್ ಕಾಪಿಯನ್ನು **obcpi2016@gmail.com** ಇ-ಮೇಲ್ ವಿಳಾಸಕ್ಕೆ ಕಳುಹಿಸಲು ತಿಳಿಸಿದೆ. ತಪ್ಪು ಮಾಹಿತಿ ಸಲ್ಲಿಸಿದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ನಂಬುಗೆಯ

ಡಾ.ರೂಪಶ್ರೀ.ಎಸ್, ಕ.ಅ.ಸೇ.,
ಜಂಟಿ ನಿರ್ದೇಶಕರು (ಆಡಳಿತ)

ಗೆ

1. ರಾಜ್ಯ ಯೋಜನಾ ನಿರ್ದೇಶಕರು,ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು.
2. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.
3. ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, 100 ಅಡಿ ರಿಂಗ್ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ ಮೂರನೇ ಹಂತ, ಬೆಂಗಳೂರು.
4. ನಿರ್ದೇಶಕರು, ಪಠ್ಯ ಪುಸ್ತಕ ಸಂಘ 100 ಅಡಿ ರಿಂಗ್ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ ಮೂರನೇ ಹಂತ, ಬೆಂಗಳೂರು.
5. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ನಿರ್ದೇಶನಾಲಯ ನೃಪತುಂಗ ರಸ್ತೆ, ಬೆಂಗಳೂರು.
6. ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು.
7. ಸಿ.ಟಿ.ಇ ಪ್ರಾಂಶುಪಾಲರುಗಳಿಗೆ.
8. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ. ಕೆ.ಜಿ ರಸ್ತೆ, ಬೆಂಗಳೂರು.
9. ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕೆ.ಜಿ ರಸ್ತೆ, ಬೆಂಗಳೂರು.
10. ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಡಯಟ್ ಬೆಂಗಳೂರು ಮತ್ತು ಮೈಸೂರು ವಿಭಾಗ.
11. ಕಛೇರಿ ಪ್ರತಿ.